ಉಡುಪಿ ತಾಲ್ಲೂಕಿನ ಎಷ್ಟು ಪ್ರಾಥಮಿಕ ಆರೋಗ್ಯ ಘಟಕಗಳು ಇವೆ ಎಂಬ ಬಗ್ಗೆ

476. ಶ್ರೀ ಪಿ. ಬಸವರಾಜು (ಬ್ರಹ್ಮಾವರ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಘಟಕಗಳೆಷ್ಟು? (ಸ್ಥಳದ ಹೆಸರಿನೊಂದಿಗೆ ವಿವರ ತಿಳಿಸಿ)

ಆ) ಈ ಕೇಂದ್ರ ಅಥವಾ ಘಟಕಗಳಲ್ಲಿ ವೈದ್ಯರ ಹುದ್ದೆಗಳು ಎಷ್ಟು ಸಮಯದಿಂದ ಖಾಲಿ ಬಿದ್ದಿರುತ್ತವೆ (ಸ್ಥಳವಾರು ವಿವರ ನೀಡುವುದು ಹಾಗೂ ಹುದ್ದೆಗಳು ಖಾಲಿ ಬಿದ್ದಿರುವುದಕ್ಕೆ ಕಾರಣಗಳನ್ನು ತಿಳಿಸುವುದು.

ಇ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? ಸರ್ಕಾರದಿಂದ ನೇಮಕಗೊಂಡ ಎಷ್ಟು ಜನ ವೈದ್ಯಾಧಿಕಾರಿಗಳು ನಿಯೋಜನೆ ಮೇಲೆ ಹೊರದೇಶಕ್ಕೆ ತೆರಳಿದ್ದಾರೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು):–

ಅ) 22 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 1 ಪ್ರಾಥಮಿಕ ಆರೋಗ್ಯ ಘಟಕಗಳಿವೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳು

1)	ಕೋಟ	12)	ಬ್ರಹ್ಮಾವರ
2)	ಹಿರಿಯಡಕ	13)	ಪಡುಬಿದ್ರಿ
3)	ಆವರ್ಸೆ	14)	ಪೆತ್ರಿ
4)	ಪೆರ್ನಂಕಿಲ	15)	ಶಿರ್ವ
5)	ಬಾರ್ಕೂರು	16)	ಕಾಪು
6)	ಕೊಕ್ಕರ್ಣೆ	17)	ಮಣಿಪುರ
7)	ಕೊಳಲಗಿರಿ	18)	ಮೂಡಬೆಟ್ಟು
8)	ಸಾಲಿಗ್ರಾಮ	19)	ಮದರಂಗಡಿ
9)	ಮಲ್ಪೆ	20)	ಕುಕ್ಕಹಳ್ಳಿ
10)	ಸಸ್ತಾನ	21)	ಸಾಯಬರಕಟ್ಟೆ
11)	ಕೆಮ್ಮಣ್ಣು	22)	ಹಿರೇಬೆಟ್ಟು

ಪ್ರಾಥಮಿಕ ಆರೋಗ್ಯ ಘಟಕ

1) ಬೆಳಪು

ಆ)

ಸ್ಥಳ		ಖಾಲಿಬಿದ್ದ ದಿನಾಂಕ
ಪ್ರಾ.ಆ.ಕೇ.	ಪಡುಬಿದ್ರಿ	11–6–90
ಅದೇ	ಆವರ್ಸೆ	22–8–89
ಅದೇ	ಪೆತ್ರಿ	11–7–88
ಅದೇ	ಕುಕ್ಕಹಳ್ಳಿ	4–6–90

ವರ್ಗಾವಣೆಯಿಂದ ಖಾಲಿಯಾಗಿದೆ.

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಲೋಕಸೇವಾ ಆಯೋಗದ ಮೂಲಕ ನೇರ ನೇಮಕಾತಿ ಮಾಡಲು ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ಯಾವ ವೈದ್ಯರೂ ಈಗ ನಿಯೋಜನೆಯ ಮೇರೆಗೆ ಪರದೇಶಕ್ಕೆ ಹೋಗಿಲ್ಲ.

ರಾಜ್ಯದ ದೊಡ್ಡ ಆಸ್ಪತ್ರೆಗಳ ಆಪರೇಷನ್ ಥಿಯೇಟರ್ ಸುವ್ಯವಸ್ಥೆ ಬಗ್ಗೆ

474. ಶ್ರೀ ಜೆ.ಎಸ್. ಆಚಾರ್ (ಬೈಂದೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ದೊಡ್ಡ ಆಸ್ಪತ್ರೆಗಳಲ್ಲಿ ಆಪರೇಷನ್ ಥಿಯೇಟರುಗಳನ್ನು ಸುವ್ಯವಸ್ಥಿತವಾಗಿ ಸುಸಜ್ಜಿತವಾಗಿ ಇರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಆ) ಈ ವಿಚಾರ ಕಾಲಕಾಲಕ್ಕೆ ಪರಿಶೀಲಿಸಿ ವರದಿ ಮಾಡಲು ಹಿರಿಯ ಅಧಿಕಾರಿಗಳ ಸಮಿತಿಯನ್ನು ಸರ್ಕಾರ ನೇಮಕ ಮಾಡಿದೆಯೇ?

ಇ) ಹಾಗಿದ್ದಲ್ಲಿ ಅವರು ಕಳೆದ 3 ವರ್ಷಗಳಲ್ಲಿ ದೊಡ್ಡ ಆಸ್ಪತ್ರೆಗಳನ್ನು ಸಂದರ್ಶಿಸಿದ್ದಾರೆ. ಹಾಗೂ ಎಷ್ಟು ವರದಿಗಳನ್ನು ಸಲ್ಲಿಸಿದ್ದಾರೆ.

ಈ) ಆ ವರದಿಗಳ ಆಧಾರದ ಮೇಲೆ ಯಾವ ರೀತಿ ಸುಧಾರಣೆ ಆಗಿದೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

ಅ) ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯದ ಶಿಕ್ಷಣ ವ್ಯಾಪ್ತಿಗೆ ಒಳಪಟ್ಟಿರುವ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಒಂದು ಶಸ್ತ್ರ ಚಿಕಿತ್ಸಾ ಪ್ರಾಧ್ಯಾಪಕರ ಹುದ್ದೆಯನ್ನು ಹಿರಿಯ ಶಸ್ತ್ರ ಚಿಕಿತ್ಸಕರು ಮತ್ತು ಶಸ್ತ್ರ ಚಿಕಿತ್ಸಾ ವಿಭಾಗದ ಮುಖ್ಯಸ್ಥರು ಎಂಬ ಹುದ್ದೆಗೆ ಮೇಲು ದರ್ಜೆಗೇರಿಸಿ, ಆ ಹುದ್ದೆಯಲ್ಲಿರುವ ಅಧಿಕಾರಿಗೆ ದೊಡ್ಡ ಆಸ್ಪತ್ರೆಗಳಲ್ಲಿರುವ ಆಪರೇಷನ್ ಥಿಯೇಟರುಗಳನ್ನು ಸುವ್ಯವಸ್ಥಿತವಾಗಿ ಸುಸಜ್ಜಿತವಾಗಿರುವಂತೆ ಸಲಹೆಗಳನ್ನು ಕೊಡುವ ಜವಾಬ್ದಾರಿಯನ್ನು ವಹಿಸಲಾಗಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಜಯದೇವ ಹೃದ್ರೋಗ ಸಂಸ್ಥೆಯಂತೆ ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳನ್ನು ಸ್ವಾಯತ್ ಸಂಸ್ಥೆಗಳಾಗಿ ಪರಿವರ್ತಿಸುವುದು

466. ಶ್ರೀ ಪರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಯದೇವ ಹೃದ್ರೋಗ ಸಂಸ್ಥೆಯಂತೆ ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳನ್ನು ಸ್ವಾಯತ್ ಸಂಸ್ಥೆಗಳಾಗಿ ಪರಿವರ್ತಿಸುವ ಬಗ್ಗೆ ಸರ್ಕಾರದ ಮುಂದೆ ಯಾವುದಾದರೂ ಪ್ರಸ್ತಾವನೆ ಇದೆಯೇ?

ಆ) ಹಾಗಿಲ್ಲದಿದ್ದಲ್ಲಿ, ಕೇಂದ್ರ ಸರ್ಕಾರ ಮತ್ತು ಇತರೇ ಸಂಸ್ಥೆಗಳಿಂದ ಸಹಾಯ ಪಡೆದು ಈ ಸಂಸ್ಥೆಗಳನ್ನು ಸರ್ಕಾರ ಸ್ವಾಯತ್ತತೆ ಸಂಸ್ಥೆಗಳಾಗಿ ಪರಿವರ್ತಿಸಲು ಕ್ರಮ ತೆಗೆದುಕೊಳ್ಳುವುದೇ?